ಗೊತ್ತಿಲ್ಲ. ಕತ್ತಲಲ್ಲಿ ನಡೆದ ಎನ್‌ಕೌಂಟರ್ ಅಂತ ಹೇಳ್ತಾರೆ. ಸತ್ತವರು ಯಾರು, ಎಷ್ಟು ಜನ ಅನ್ನೋದು ನಿಗೂಢವಾಗಿದೆ! ನಿಮ್ಮ ಹುಡುಗ ಅಜಯ್‌ನ ಹೋಲಿಕೆ ಯಾರಿಗೂ ಇಲ್ಲ' ಅಂತ ವೆಂಕಟನಾರಾಯಣ ಹೇಳಿದ ಮೇಲೆ ಪ್ರೊಫೆಸರ್ ನೆಮ್ಮದಿಯ ಉಸಿರು ಬಿಟ್ಟರು.

ಮಾರನೆ ಬೆಳಿಗ್ಗೆ ಐದೂವರೆ ಹೊತ್ತಿಗೆ ಅವರ ಸೆಲ್ ಫೋನ್ ರಿಂಗ್ ಆಯಿತು. ಆ ಕಡೆಯಿಂದ ಮಾಧವಿ!

'ಸರ್, ನಿನ್ನೆ ರಾತ್ರಿ ಹನ್ನೊಂದು ಗಂಟೆ ಹೊತ್ತಿಗೆ ಅಜಯ್ ಮನೆಗೆ ಬಂದ. ಅವನ ಜತೆ ಒಬ್ಬಳು ಅವನಿಗಿಂತ ಸ್ವಲ್ಪ ದೊಡ್ಡ ಹೆಂಗಸು ಮತ್ತೆ ಇನ್ನೊಬ್ಬ ಬಂದಿದ್ದ.

ಅಪ್ಪ ಹೋಗಿದ್ದು ಗೊತ್ತಾಯಿತು. ಅದಕ್ಕೇ ಎಲ್ಲಾ ಬಿಟ್ಟು ಬಂದೆ ಅಂತ ಹೇಳಿದ. ಇಡೀ ರಾತ್ರಿ ನಾನು ತಪ್ಪು ಮಾಡಿದೆ ಅಂತ ಹೇಳಿಕೊಂಡು ಅಳ್ತಲೇ ಇದ್ದ. ಅವನ ಜತೆ ಬಂದಿರುವ ಹೆಂಗಸು ಯಾರು ಅನ್ನೋದನ್ನೂ ನಾನು ಕೇಳಲಿಲ್ಲ... ಆದರೆ, ಈಗ ಸ್ವಲ್ಪ ಹೊತ್ತಿನ ಮೊದಲು, ಸುಮಾರು ನಾಲ್ಕು ಗಂಟೆ ಹೊತ್ತಿಗೆ ಎರಡು ಜೀಪುಗಳಲ್ಲಿ ಪೊಲೀಸರು ನಮ್ಮ ಎಸ್ಟೇಟಿಗೆ ಬಂದರು. ಅವರು ಅನಂತಪುರದವರಂತೆ. ಅಜಯ್ ಮತ್ತು ಅವನ ಜತೆ ಬಂದ ಇಬ್ಬರನ್ನೂ ಅರೆಸ್ಟ್ ಮಾಡಿಕೊಂಡು ಹೋದರು. ಏನು ಮಾಡಬೇಕು ಅನ್ನೋದೆ ನಂಗೆ ಗೊತ್ತಾಗಲಿಲ್ಲ. ನಮ್ಮ ವಕೀಲರಿಗೆ ಫೋನ್ ಮಾಡೋಕೆ ಅವಕಾಶ ಕೊಡಲಿಲ್ಲ. ಲೋಕಲ್ ಪೊಲೀಸರಿಗೆ ಫೋನ್ ಮಾಡ್ತೀನಿ ಅಂದರೂ ಬಿಡಲಿಲ್ಲ. ಬಂದವರಲ್ಲಿ ಇಬ್ಬರು ಇನ್‌ಸ್ಪೆಕ್ಟರ್‌ಗಳಿದ್ದರು. ಬರೀ ತೆಲುಗಿನಲ್ಲೇ ಮಾತಾಡ್ತಾ ಇದ್ದರು. ಅಜಯನೂ ತೆಲುಗಿನಲ್ಲೇ ಉತ್ತರ ಹೇಳ್ತಿದ್ದ. ನಾನು ಇಂಗ್ಲಿಷ್‌ನಲ್ಲಿ ಮಾತಾಡಿದೆ. ಅವರಿಗೆ ಅರ್ಥವೇ ಆಗಲಿಲ್ಲ ಅಂತ ಕಾಣುತ್ತೆ. ಯೆಸ್ ಮೇಡಂ, ನೋ ಮೇಡಂ ಅಂದರೆ ಹೊರತು ಒಂದು ಸೆಂಟೆನ್ಸ್ ಸಹ ಇಂಗ್ಲಿಷ್ ಮಾತಾಡಲಿಲ್ಲ.

ಅವರು ಹೋದ ಕೂಡಲೇ ನಿಮಗೆ ಫೋನ್ ಮಾಡಿ ಇದನ್ನೆಲ್ಲ ಹೇಳಬೇಕು ಅನ್ನಿಸ್ತು... ನೀವು ಮಲಗಿರಬಹುದು ಅಂತ ಡಿಸ್ಟರ್ಬ್ ಮಾಡಲಿಲ್ಲ. ಅಜಯ್ ಬದುಕಿದ್ದಾನೆ ಅಂತ ಸಂತೋಷ ಆಗ್ತಿದೆ. ಹೇಗಾದರೂ ಮಾಡಿ ಅವನನ್ನು ಜಾಮೀನಿನ ಮೇಲೆ ಬಿಡಿಸಬೇಕು. ಮನೆಯ ಕಡೆ ಒಂದು ವ್ಯವಸ್ಥೆ ಮಾಡಿ, ನಾನು ಇವತ್ತೇ ಅನಂತಪುರಕ್ಕೆ ಹೋಗ್ತೀನಿ. ಅಲ್ಲಿ ಯಾರಾದರೂ ಲಾಯರುಗಳನ್ನು ಭೇಟಿ ಮಾಡಬೇಕು. ದುಡ್ಡು ಎಷ್ಟಾದರೂ ಖರ್ಚಾಗಲಿ ಅಜಯನಿಗೆ ಜಾಮೀನು ಕೊಡಿಸಬೇಕು. ಅನಂತಪುರದಲ್ಲಿ ನಾನು ಯಾರನ್ನು ಭೇಟಿ ಮಾಡಬೇಕು ಅನ್ನೋದನ್ನು ನೀವೇ ಹೇಳಿ ಸರ್' ಅಂತ ಒಂದೇ ಉಸುರಲ್ಲಿ ಹೇಳಿ ಉತ್ತರಕ್ಕೆ ಕಾದಳು.

'ಮಾಧವಿ ಹೆದರಬೇಡ... ಎಲ್ಲಾ ಸರಿ ಹೋಗುತ್ತೆ... ನಂಗೆ ಗೊತ್ತಿರೋ ವಕೀಲರ ಜತೆ ಮಾತಾಡಿ ಬೇಲ್‌ಗೆ ವ್ಯವಸ್ಥೆ ಮಾಡಿಸ್ತೀನಿ. ಅಜಯನಿಗೆ ಜಾಮೀನು ಸಿಗುತ್ತೆ... ಯೋಚನೆ ಮಾಡೋಕೆ ಸ್ವಲ್ಪ ನಂಗೆ ಟೈಂ ಕೊಡು. ಹತ್ತು ನಿಮಿಷ ಬಿಟ್ಟು ಮತ್ತೆ ನಾನೇ ಫೋನ್ ಮಾಡ್ತೀನಿ ಹೆದರಬೇಡ' ಎನ್ನುತ್ತಲೇ ಕುರ್ಚಿಯ ಮೇಲೆ ಕುಸಿದು ಕೂತರು...



### ಪ್ರೇಮಕುಮಾರ್ ಹರಿಯಬ್ಬೆ

ಹುಟ್ಟೂರು ಚಿತ್ರದುರ್ಗ ಜಿಲ್ಲೆಯ ಹರಿಯಬ್ಬೆ ಗ್ರಾಮ. ಈಗ ಬೆಂಗಳೂರಿನಲ್ಲಿ ವಾಸ. ವೃತ್ತಿಯಿಂದ ಪತ್ರಕರ್ತ. 'ಸತ್ತವರ ಬದುಕು', 'ದೇವ ಕಣಗಿಲೆ' ಸಂಕಲನದ ಕಥೆಗಳೂ ಸೇರಿದಂತೆ 40ಕ್ಕೂ ಹೆಚ್ಚು ಕತೆಗಳು 'ಪ್ರಜಾವಾಣಿ', 'ಸುಧಾ', 'ಮಯೂರ' ಪತ್ರಿಕೆಗಳಲ್ಲಿ ಪ್ರಕಟವಾಗಿವೆ.